ರಾಜ್ಯದಲ್ಲಿ ನೂತನ ಗ್ರಂಥಾಲಯಗಳ ಸ್ಥಾಪನೆ ಬಗ್ಗೆ

2875 (2821) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೂತನವಾಗಿ ಗ್ರಂಥಾಲಯಗಳ ಸ್ಥಾಪನೆಗಾಗಿ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಸಚಿವರು):

ಅ) ಹೌದು.

ಆ) ಹಣಕಾಸಿನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಮನೆಗಳ ನಿರ್ಮಾಣ ವೆಚ್ಚವನ್ನು ಹೆಚ್ಚಿಸುವ ಬಗ್ಗೆ

2876 (3604) ಶ್ರೀ ಬಚ್ಚೇಗೌಡ (ಹೊಸಕೋಟೆ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದೀಚೆಗೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ; ಮತ್ತು ಈಗಾಗಲೇ ಹಂಚಿಕೆ ಮಾಡಲಾದ ಮನೆಗಳೆಷ್ಟು;

ಆ) ಹಾಗಿದ್ದಲ್ಲಿ, ಮನೆಗಳ ನಿರ್ಮಾಣ ಕಾರ್ಯಕ್ಕೆ ಬಿಡುಗಡೆ ಮಾಡಲಾದ ಹಣವೆಷ್ಟು;

ಇ) ಈ ಹಣವನ್ನು ಯಾವ ಯಾವ ಮೂಲಗಳಿಂದ ಕ್ರೋಢೀಕರಿಸಿ ಭರಿಸಲಾಗಿದೆ;

ಈ) ಮನೆಗಳ ನಿರ್ಮಾಣ ಕಾರ್ಯಗಳು ಯಾವ ಯಾವ ಹಂತದಲ್ಲಿವೆ; ಎಷ್ಟು ಮನೆಗಳನ್ನು ನಿರ್ಮಿಸಲು ಗುರಿ ಹೊಂದಲಾಗಿತ್ತು;

ಉ) ಮನೆಗಳ ನಿರ್ಮಾಣದ ವೆಚ್ಚ ರೂ. 20000 ಗಳಿಂದ ರೂ. 25,000 ಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ಎರಡು ವರ್ಷಗಳಿಂದೀಚೆಗೆ (2001–02 ಮತ್ತು 2002–03) 3,56,136 ಮನೆಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು ಸದರಿ ಎಲ್ಲಾ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಆ, ಇ) ಮನೆಗಳ ನಿರ್ಮಾಣ ಕಾರ್ಯಕ್ಕೆ 2001–02 ಮತ್ತು 2002–03ರಲ್ಲಿ ನಿಗಮದಿಂದ ಒಟ್ಟು ರೂ. 44,986 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ರಾಜ್ಯ ಸರ್ಕಾರದ ಸಹಾಯಧನ ರೂ. 26,181 ಲಕ್ಷ ಮತ್ತು ಹುಡ್ಕೋದಿಂದ ಸಾಲ ರೂ. 18,805 ಲಕ್ಷ ಸೇರಿವೆ.

ಈ) ಗುರಿ ಮತ್ತು ಪ್ರಗತಿಯ ವಿವರಗಳು ಅನುಬಂಧ–ಅನಲ್ಲಿ ನೀಡಲಾಗಿದೆ.

ಉ) ಇಲ್ಲ.